"ಮೊಹಿಯುದ್ದೀನ್ ಅವಳ ಗಂಡನ ಮುಸುಡಿಗೆ ಎರಡು ಇಕ್ಕಬೇಕೆಂದು ಎರಡಡಿ ಹೆಜ್ಜೆ ಮುಂದಿಟ್ಟ. ಆದರೆ, ಅದು ಇನ್ನೊಂದು ಗಲಭೆಗೆ ಕಾರಣವಾಗುತ್ತದೆಂದು ತನ್ನನ್ನು ತಾನು ನಿಯಂತ್ರಿಸಿಕೊಂಡ. ಹಿರಿಯರೆದುರು ಈ ಅಮ್ಮನಿಗೆ ಮಂಗಳಸೂತ್ರ ಕಟ್ಟಿ ಮದುವೆಯಾದವರು ನೀವು. ಗಂಡನಾಗಿ ನಿಮ್ಮ ಧರ್ಮ ಪಾಲಿಸಿ ಎಂದು ವಿನಂತಿಸಿದ. ಆದರೆ, ಅವಳ ಗಂಡ ಇನ್ನು ಮುಂದೆ ನಾನಿವಳ ಗಂಡನಲ್ಲ, ಇವಳು ಎಲ್ಲಿಗೆ ಬೇಕಾದರೂ ಹೋಗಿ ಸಾಯಲಿ – ಎಂದುಬಿಟ್ಟ."

"ಛೇ! ಅವನೆಂತಹ ಗಂಡ?"

"ಇಲ್ಲಿ ಕೇಳಿ. ಗಂಡನ ಮಾತು ಕೇಳಿದ ಆ ಹೆಣ್ಣು ಕಿರಿಚಿತು. ನೀನು ನನ್ನ ಗಂಡನಲ್ಲದಿದ್ದರೆ ನಾನು ನಿನ್ನ ಹೆಂಡತಿಯೂ ಅಲ್ಲ. ತೆಗೆದುಕೋ ನೀನು ಕಟ್ಟಿದ್ದನ್ನು ಎಂದು ಮಂಗಳಸೂತ್ರವನ್ನು ಕಿತ್ತು ಅವನ ಮುಖಕ್ಕೆ ಎಸೆದು ಥೂ... ಎಂದು ಕ್ಯಾಕರಿಸಿ ಉಗುಳಿ ಉನ್ಮಾದಕ್ಕೆ ಒಳಗಾದವಳಂತೆ ಓಡಿ ಕರಾಳ ರಾತ್ರಿಯ ಕಪ್ಪುಕತ್ತಲಲ್ಲಿ ಕರಗಿ ಹೋದಳು."



"ಆಮೇಲೆ ಅವಳಿಗೇನಾಯಿತು?"

"ಅದು ಇನ್ನೂ ಗೊತ್ತಾಗದ ನಿಗೂಢ ಸರ್. ಅವಳು ಕಾಣೆಯಾಗಿದ್ದಾಳೆಂದು ಕಂಪ್ಲೈಂಟು ಕೊಡುವವರು ಯಾರೂ ಇರಲಿಲ್ಲ. ಆದುದರಿಂದ ಅವಳ ಸುಳಿವು ಗೊತ್ತಾಗಲೇ ಇಲ್ಲ. ಗಂಡನೇ ನಿರಾಕರಿಸಿದ ಮೇಲೆ ಅವಳ ಬಗ್ಗೆ ಯಾರು ತಲೆ ಕೆಡಿಸಿಕೊಳ್ಳುತ್ತಾರೆ ಸರ್, ಅದೂ ಎರಡು ಊರುಗಳು ಸುಟ್ಟಿರುವಾಗ."

ಆ ವ್ಯಕ್ತಿ ಮತ್ತೊಮ್ಮೆ ನಿಡುಸುಯ್ದ.

"ಈಗ ಸೇತುವೆ ದೋಣಿ ದಾಟುವಲ್ಲಿಯೇ ಆಗಿದೆಯಲ್ಲಾ? ಅದಕ್ಕೆ ಎರಡೂ ಊರವರು ಸಮ್ಮತಿಸಿದ್ದು ಹೇಗೆ?"

ಪ್ರಕರಣ ಅಷ್ಟು ಸುಲಭವಾಗಿ ಇತ್ಯರ್ಥ ಆಗಲಿಲ್ಲ ಸರ್. ಕೊನೆಗೆ ಪಿ.ಡಬ್ಲ್ಯು.ಡಿ. ಎಂಜಿನಿಯರ್ ಬಂದು ಎಲ್ಲಿ ಸೇತುವೆಯಾದರೆ ಕಡಿಮೆ ಖರ್ಚು ಎಂದು ಎಸ್ಟಿಮೇಟು ತಯಾರಿಸಿದ. ಅದರ ಪ್ರಕಾರ ದೋಣಿ ದಾಟಿಸುವಲ್ಲಿ ಸೇತುವೆ ಆದರೆ ಖರ್ಚು ತುಂಬಾ ಕಡಿಮೆ ಎಂದು ಕಂಡು ಬಂತಂತೆ. ಆಮೇಲೆ ಯಾರೂ ತಕರಾರು ಎತ್ತಲಿಲ್ಲ."